ವ್ಯವಹಾರಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಹಾಲಿಂಗಪುರ ನಗರದಲ್ಲಿ ಬಸ್ ಘಟಕ ಮಂಜೂರಾಗಿ ಸ್ಥಳಾವಕಾಶ ತೊಂದರೆಯಿಂದ ತಡೆಹಿಡಿದಿದ್ದು ನಿಜವೇ; ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು.

ಆ) ಹಾಗಿಲ್ಲದಿದ್ದಲ್ಲಿ, ಸಾಂಗ್ಲಿ, ಕೊಲ್ಹಾಪೂರ, ಬೆಳಗಾಂವ, ಬಿಜಾಪೂರ, ಬಾಗಲಕೋಟೆ, ಹುಬ್ಬಳ್ಳಿ ಈ ರೀತಿ ಎಲ್ಲ ಕಡೆ ರಸ್ತೆಗಳಿಗೆ ಮಧ್ಯ ಭಾಗವಾಗಿರುವ ಮಹಾಲಿಂಗಪರಕ್ಕೆ ಬಸ್ ಘಟಕ ಅವಶ್ಯವಿದ್ದು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಆರ್. ಅಶೋಕ್ (ಸಾರಿಗೆ, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು)–

ಅ) ಮತ್ತು ಆ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿರುವುದರಿಂದ ಮಹಾಲಿಂಗಪುರದಲ್ಲಿ ಘಟಕ ನಿವೇಶನ ಪಡೆಯುವ ಪ್ರಕ್ರಿಯೆಯನ್ನು ಕೈಬಿಡಲಾಗಿದೆ. ಘಟಕ ನಿರ್ಮಾಣದ ಪ್ರಸ್ತಾವನೆಯು ಸದ್ಯಕ್ಕೆ ಇರುವುದಿಲ್ಲ.

ಮಂಡ್ಯ ಮೆಡಿಕಲ್ ಕಾಲೇಜಿನ ಕಟ್ಟಡದ ಕಾಮಗಾರಿ ಅಪೂರ್ಣವಾಗಿರುವುದು

578 (764) ಶ್ರೀ ಶ್ರೀನಿವಾಸ್ ಎಂ. (ಮಂಡ್ಯ):– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಂಡ್ಯ ನಗರದ ಮೆಡಿಕಲ್ ಕಾಲೇಜಿನ ಕಟ್ಟಡದ ಕಾಮಗಾರಿಯು ಅಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಅ) ಹಾಗಿದ್ದಲ್ಲಿ, ಈ ಕಟ್ಟಡದ ಕಾಮಗಾರಿಯೂ ಪೂರ್ಣಗೊಳ್ಳದಿರಲು ಕಾರಣಗಳೇನು;

ಇ) ಈ ಕಾಲೇಜಿಗೆ ಶಂಖು ಸ್ಥಾಪನೆಯಾದಾಗಿನಿಂದ ಈವರೆವಿಗೂ ಯಾವ ಯಾವ ಕಟ್ಟಡದ ಕಾಮಗಾರಿಗಳಿಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ; ವರ್ಷಾವಾರು ವಿವರಗಳನ್ನು ನೀಡುವುದು;

ಈ) ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಈ ಕಾಮಗಾರಿಯನ್ನು ಪೂರ್ಣಗೊಳಿಸಿ ಕಟ್ಟಡವನ್ನು ಸ್ವಾಧೀನಕ್ಕೆ ಪಡೆದುಕೊಳ್ಳಲು ಸರ್ಕಾರ ಪ್ರಯತ್ನಿಸುವುದೇ;

ಉ) ಹಾಗಿದ್ದಲ್ಲಿ, ಈ ಕಟ್ಟಡ ಯಾವಾಗ ಸ್ವಾಧೀನಕ್ಕೆ ಪಡೆದುಕೊಳ್ಳಲಾಗುವುದು?

ಶ್ರೀ ಎಸ್. ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು)–

ಅ) 2ನೇ ಹಂತದ ಕಟ್ಟಡ ಕಾಮಗಾರಿಯು ಪೂರ್ಣಗೊಂಡಿದೆ.

ಆ) ಉದ್ಭವಿಸುವುದಿಲ್ಲ

ಇ):–

ಲಕ್ಷ ರೂ.ಗಳಲ್ಲಿ

2005–06	1500.00
2006–07	1000.00
2007–08	2075.00
2008–09	1350.00
2009–10	174.00

ಈ) ಹೌದು

ಉ) ಜುಲೈ 2010ರ ಅಂತ್ಯಕ್ಕೆ